ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.772/2019

| | | | |
|---|---|---|---|
| ಹೆಸರು | : | ಸಾದಿಖ್ ಪಾಶ | ಸಿ .ಡಬ್ಲ್ಯೂ :3 |
| ತಂದೆ ಹೆಸರು | : | ಸೈಯದ್ ಸೈದುದ್ದೀನ್ | ಪಿ .ಡಬ್ಲ್ಯೂ :2 |
| ವಯಸ್ಸು | : | 46 ವರ್ಷ | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ22-04-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 19-02-2019 ರ ಸ್ಥಳ ಪಂಚನಾಮೆ ಮತ್ತು 21-02-2019 ರ ಆರೋಪಿತರ ತೋರಿಸಿದ ಸ್ಥಳ ಪಂಚನಾಮೆ ಮತ್ತು ಅವುಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ ಅವುಗಳನ್ನು ನಿಪಿ 2 ಮತ್ತು 3 ಮತ್ತು ಸಹಿಗಳನ್ನು ನಿಪಿ -2 ಎ ಮತ್ತು ನಿಪಿ -3 ಎ ಎಂದು ಗುರುತಿಸಲಾಯಿತು .

ಸುಮಾರು 6-7 ವರ್ಷಗಳ ಹಿಂದೆ ಒಂದು ದಿನ ಗುಬ್ಬಿ ಪೊಲೀಸ್ ಠಾಣೆಯ ಬಳಿ ನಿಪಿ -2 ಮತ್ತು 3 ಕ್ಕೆ ಸಹಿ ಮಾಡಿದ್ದೇನೆ . ನಿಪಿ-2 ಮತ್ತು 3 ರಲ್ಲಿ ಏನು ಬರೆದಿದೆ ಗೊತ್ತಿಲ್ಲ . ಪೊಲೀಸರ ಕೋರಿಕೆಯ ಮೇರೆಗೆ ನಿಪಿ -2 ಮತ್ತು 3 ಕ್ಕೆ ಸಹಿ ಮಾಡಿದ್ದೇನೆ . ನಿಪಿ -2 ಮತ್ತು 3 ರ ಸಹಿ ಮಾಡುವಾಗ ನನ್ನೊಡನೆ ಚಾಸಾ -2 ಸಹಾ ಇದ್ದರು . ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

ಪಾಟೀಸವಾಲುಃ ಸ ಸ ಅ ರವರಿಂದಃ-

ನಿಪಿ -2 ಮತ್ತು 3 ರಲ್ಲಿನ ವಿವರಗಳನ್ನು ಓದಿ ತಿಳಿಸಿ, ಚಾಸಾ -1 ರವರು ತಮಗೆ ಸೇರಿದ 500 ಮೀಟರ್ ಕೇಬಲ್ ಕಳ್ಳತನ ವಾಗಿದ್ದ ಸಂಬಂಧ ನೀಡಿದ್ದ ದೂರಿನ ಪ್ರಕಾರ ಸಂಜೆ 5.30 ರಿಂದ 6.15 ರ ಅವಧಿಯಲ್ಲಿ ಗುಬ್ಬಿಯ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ ಮತ್ತು ನಾಗಲಿಂಗೇಶ್ವರ ದೇವಸ್ಥಾನ ಮಧ್ಯದ ಸ್ಥಳದಲ್ಲಿ ನಿಪಿ -2 ರಂತೆ ಮಹಜರು ಮಾಡಿದ್ದಾರೆ , ಅಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ .

ದಿಃ 21-02-2019 ರಂದು ಆರೋಪಿತರುಗಳು ಅದೇ ಸ್ಥಳದಲ್ಲಿ ಕೇಬಲ್ ಕಳ್ಳತನ ಮಾಡಿದ್ದೇವೆ ಎಂದು ಹೇಳಿದ ಮೇರೆಗೆ ಪೊಲೀಸರು ಬೆಳಗ್ಗೆ 8.30 ರಿಂದ 9.15 ರವರೆಗೆ ನಿಪಿ -3 ರಂತೆ ಮಹಜರು ಮಾಡಿದ್ದು ಅಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ . ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>- ಇಲ್ಲವೆಂದು ತಿಳಿಸಿದ್ದಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.